Regd No M 1299 Sri ಶನಿ 14—11—51

SATYAVADI = 35th Year



ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಸೈ

ಹಿಂಸಾತ್ಮಕ ದೃಷ್ಟಿಯೇ ಕಮ್ಯುನಿಸ್ಟ್ ಪಕ್ಷದ ಗುರಿಯಿಲ್ಲ

ಮಳೆ ಹೋದದ್ದರಿಂದ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ದೊಡ್ಡ ರಾಗಿ ಮತ್ತು ಕೆರೆ ಕೆಳಗಿನ ಬಯಲಿನಲ್ಲಿ ಬತ್ತದ ಪೈರಿಗೆ ನಷ್ಟ ಸಂಭವಿಸಿದೆ.

ಕಾನಕಾನಹಳ್ಳಿ ಪೌರಸಭೆ ಉಪಾಧ್ಯಕ್ಷರ ಮೇಲೆ ಅವಿಶ್ವಾಸ ಠರಾವು' ಮಂಡಿಸುವ ಪ್ರಯತ್ನವಿದೆಯೆಂಬ ಸುದ್ದಿ ಇದೆ

ಶ್ರೀ ಎಲ್. ಎಸ್ ರಾಜುರವರ ಮೊಕದ್ದಮೆ ವಿಚಾರಣೆಗೆ ಮೈಸೂರು ಸರ್ಕಾರ ಹೊಂಗಿನಿಂದ ಕರೆಸಲು ಅಂಗೀಕರಿಸಿತು ಪಂ|| ನೆಹರು ಇದಕ್ಕೆ ವಿರುದ್ಧವಾಗಿಯೇ ಸಲಹೆ ಕೊಟ್ಟಿದ್ದು. ಈ ಸಲಹೆಯನ್ನು ಬೆಂಗಳೂರಿನಲ್ಲಿ ಸಮಾವೇಶವಾಗಿದ್ದ ಶಾಸನ ಸಭೆ ಕಾಂಗ್ರೆಸ್ ಪಕ್ಷ ನಿನ್ನೆ ಸರ್ವಾನುಮತದಿಂದ ಅಂಗೀಕರಿಸಿತು.

ನಿನ್ನೆ ಮೈಸೂರು ಶಾಸನ ಸಭೆಯಲ್ಲಿ ಶ್ರೀ ಇಮಾಂರವರು ನಿರ್ಣಯ ಮಂಡಿಸಿ ಮುಖ್ಯ ಮಂತ್ರಿಗಳ ಹೇಳಿಕೆ ಸಂತೃಪ್ತಿಕರವಾಗಿಲ್ಲ. ಈಗ ಮೈಸೂರಿನ ಮಂತ್ರಿ ಮಂಡಲ ರಾಜೀನಾಮೆ ಕೊಟ್ಟು ಮೈಸೂರಿನ ಗೌರವ ಉಳಿಸಲು ತಿಳಿಸಿದರು

———

ಹೆಂಡತಿಯ ಮೇಲಿನ ಪ್ರೇಮಾತಿಶಯದ ಪರಿಣಾಮ

ರಸಾಯನಿಕ ಪರಿಶೋಧನೆ ಶಾಲೆಯಲ್ಲಿ ಯು ನೌಕರನು ಅವನು ; ಅವನ ಹೆಂಡತಿಯು ವ್ಯಾಧಿಗ ಸ್ಥಳಾದಳು : ಆಸ್ಪತ್ರೆಗೆ ಸೇರಿಸಿ ಶಸ್ತ್ರಚಿಕಿತ್ಸೆ ಮಾಡಿಸಿದನ ; ಆಕೆಯು ಬಲಹೀನಳಾದಳು. ಆತನ ವಯಸ್ಸು 27 ; ಹೆಂಡತಿಯ ಮೇಲೆ ಪ್ರೇಮವು ಹೆಚ್ಚು. ಪೆನ್ಸಿಲಿನ್, ಸ್ಟ್ರೆಪ್ಟೊಮಿಸಿನ್ ಮುಂತಾ ಹೊಸ ಔಷಧಗಳು ಇಂಥವರಿಗೆ ಉಪಯುಕ್ತಗಳೆಂದು ಯಾರೋ ತಿಳಿಸಿದರು. ತನ್ನ ಪರಿಶೋಧನಾಲಯದಲ್ಲಿ ಎಲ್ಲಿಯಾದರೂ ಇದೆಯೇ ಎಂದು ಹುಡುಕಿ ನೋಡಿದನು. ಒಂದು ಸಣ್ಣ ಸೀಸೆಯ ಕಂಡುಬಂದಿತು ; ' ಸಮಿಾಕರಿಸಲ್ಪಟ್ಟ ಸ್ಟ್ರೆಪ್ಟೊಮಿಸಿನ್ ' ಎಂದು ಅದರ ಹೆಸರಿತ್ತು ; ಅದನ್ನು ಸಂಗ್ರಹಿಸಿ ಮನೆಗೆ ತೆಗೆದುಕೊಂಡುಹೋಗಿ ಸಂತೋಷದಿಂದಿದ್ದನು.

ಆದರೆ ಮಾರನೆಯ ದಿನ ಆ ಪರಿಶೋಧನಾಲಯದ ಮುಖ್ಯಸ್ಥನು ' ಅದು ವಿಷವೆಂದೂ, ಅದನ್ನು ಕದ್ದವನು ಹುಚ್ಚನೆಂದೂ ಹೇಳಲಾರಂಭಿಸಿದನು. ಇದರಿಂದ ಕಳ್ಳನಿಗೆ ಭಯವುಂಟಾಯಿತು . ಮನೆಗೆಹೋಗುತ್ತಲೂ ಆ ಸೀಸೆಯನ್ನು

— ಹಿಂದಿನ ಪುಟ ನೋಡಿ

ಗೋಪಾಲ್ ಪತ್ರಿಕಾ ಸಮ್ಮೇಳನ

ಮೈಸೂರು : ಭಾರತದ ಮಹಾ ಚುನಾವಣೆ ನಿಷ್ಪಕ್ಷಪಾತವಾಗಿ ನಡೆದರೆ ಕಮ್ಯುನಿಸ್ಟ್ ಪಕ್ಷ ಲೋಕಸಭೆ 75 ಸ್ಥಾನಗಳನ್ನು ಗಳಿಸಬಲ್ಲದು ಎಂದು, ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷದ ಧುರೀಣರಾದ ಶ್ರೀ ಎ. ಕೆ. ಗೋಪಾಲರವರು ಈ ಬೆಳಿಗ್ಗೆ ದಾಸಪ್ರಕಾಶದಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ತಿಳಿಸಿದರು

ತಿರುವಾಂಕೂರು-ಕೊಚ್ಚಿನ್ ಮತ್ತು ಹೈದರಾಬಾದ್‌ಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲೆ ನಿರ್ಬಂಧಾಜ್ಞೆ ಹಾಗೂ ಪ್ರತಿಬಂಧನಾರ್ಥ ಇದೇ ತಿ|| 18 ರಲ್ಲಿ ಪ್ರತಿಬಂಧನಾ ದಿನಾಚರಣೆ ಭಾರತಾದ್ಯಂತ ಆಚರಿಸಲು ನಿರ್ಧರಿಸಿರುವ ದಾಗಿ ಶ್ರೀ ಗೋಪಾಲ್ ತಿಳಿಸಿದರು.

ಭಾರತದ ಸಾಮಾಜಿಕ, ಆರ್ಥಿಕ ಸ್ಥಿತಿ ಬದಲಾಗಬೇಕೆಂಬುದು ಕಮ್ಯುನಿಸ್ಟ್ ಪಕ್ಷದ ಗುರಿ. ಅಹಿಂಸಾಯುತವಾಗಿ ಶಾಂತಿರೀತಿಯಿಂದ ಪರಿವರ್ತನೆ ಆಗುವುದರಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಮೊದಲು ಉತ್ಸಾಹವಿದೆ. ಬದಲಾವಣೆ ಆಗದಿದ್ದರೆ ಸಮಸ್ಯೆ ನಿಂತಲಾಗುವದಿಲ್ಲ. ಬೇರೆ ವಿಧಗಳಿಗೆ ಕೈಹಚ್ಚಬೇಕಾಗುವದು ಎಂದು ತಿಳಿಸಿದರು

ಪಾರ್ಲಿಮೆಂಟರಿ ವಿಧದಿಂದ ಸಾಮಾಜಿಕ ಬದಲಾವಣೆ ಆಗುವುದೆಂಬುದರಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ನಂಬುಗೆ ಇಲ್ಲ ಎಂದು ಶ್ರೀ ಗೋಪಾಲ್ ತಿಳಿಸಿದರು

ಅಹಿಂಸಾಯುತವಾಗಿ ಸಾಮಾಜಿಕ ಬದಲಾವಣೆ ಆಗುವದರಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಆನಂದವಿದೆ ಅಹಿಂಸೆಯ ಪ್ರಯೋಜನ ಆಗದೆ ಹೋದರೆ ಕಾನೂನಿಯನ್ನು ಜನ ಅಪೇಕ್ಷೆ ಮಾಡಿದರೆ ಅದಕ್ಕಾಗಿ ಕಮ್ಯುನಿಸ್ಟ್ ಪಕ್ಷ ಪರಿಶೀಲಿಸಿ ಶಕ್ತಿಯುತವಾಗುವದು ಮುಂತಾದ ಚುನಾವಣೆ ತೀರಿದ ನಂತರ ಜನವಿನ ತಿಳಿದಾಗಿ ಅವರು ತಿಳಿಸಿದರು.

ಭಾರತಾದ್ಯಂತ ಕಮ್ಯುನಿಸ್ಟ್ ಪಕ್ಷ 500 ಮಂದಿ ಪೂರ್ಣಾವಧಿಕಾರಿಗಳನ್ನು ನಿಲ್ಲಿಸಿರುವುದು. ಕಮ್ಯುನಿಸ್ಟ್ ಪಕ್ಷಕ್ಕೆ ಎಲ್ಲಿ ಬೆಂಬಲವುಂಟೋ ಅಲ್ಲಿ ನಾವು ಪ್ರಚಾರ ಮಾಡಲು ಅವಕಾಶವಿಲ್ಲದಂತೆ ನಿಶೇಧ ಆಜ್ಞೆ ಆಗಿದೆ. ಕೇರಳಾದಲ್ಲಿ ನನಗೆ ಹೆಚ್ಚು ಬೆಂಬಲ ಆದರೆ ಅಲ್ಲಿ ನಿಶೇಧ ಆಜ್ಞೆ. ಕೊಚ್ಚಿನ್ ತಿರುವಾಂಕೂರಿನಲ್ಲಿ ನಮ್ಮ ಪಕ್ಷವೂ ಸೇರಿದ ಸಂಯುಕ್ತ ಪಕ್ಷದ 6 ಮಂದಿ ಪೂರ್ಣಾವಧಿಕಾರಿಗಳನ್ನು ಬಂಧಿಸಲಾಗಿದೆ. ಬಂಧನದಲ್ಲಿರುವ ಕಮ್ಯುನಿಸ್ಟರ ಹೆಸರು ಮತಯಾದಿಯಲ್ಲಿ ಇಲ್ಲ ಎಂದು ಅವರು ತಿಳಿಸಿದರು.

ಸುದ್ದಿಗಳು

ನೇಪಾಳ ಸಚಿವ ಮಂಡಲಕ್ಕೆ ರಾಣಾ ಗುಂಪು ಮೊನ್ನೆ ರಾಜೀನಾಮೆ ಅರ್ಪಿಸಿತೆಂದು ಖಟಿಮಂಡು ವಾರ್ತೆ.

ಂ ಂ

ಬ್ರೋಚ್ ಮತ್ತು ಸೂರತ್ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿ ಹದಿನೈದು ಸಹಸ್ರ ಮಂದಿ ಬಿಕ್ಕಟ್ಟಿಗೆ ಸಿಕ್ಕಿದ್ದಾರೆ.

ಂ ಂ

ಕಮ್ಯುನಿಸ್ಟ್ ಚುನಾವಣಾ ಸಭೆಯಲ್ಲಿ ಮೊನ್ನೆ ಕಮ್ಯುನಿಸ್ಟ್ ಮುಖಂಡ ಶ್ರೀ ರಾಮಯ್ಯರೆಡ್ಡಿಯವರನ್ನು ಸೆರೆ ಹಿಡಿಯಲಾಯಿತು ಅನಂತಪುರ ವಾರ್ತೆ ಅವರ ಮೇಲೆ 4 ವರ್ಷಗಳ ಹಿಂದೆ ವಾರೆಂಟ್ ಹೊಂಡಿಸಲಾಗಿತ್ತು.

ಂ ಂ

ಪಾಂಡಿಚೇರಿಗೆ ಸೆಪ್ಟಂಬರಿನಲ್ಲಿ 152 000 ಟ್ಯಾ ತಂಡು ಬಟ್ಟೆಗಳು ಆಮದಾಗಿರುವದಾಗಿ ಕಾರೈಕಲ್ ವಾರ್ತೆ

ಂ ಂ

ಕಾಂಗ್ರೆಸ್ ಈಗ ಕಳ್ಳಪೇಟೆ ವರ್ತಕರ ಸಾಗೂ ಲಾಭಬಡಕರ ಸಂಸ್ಥೆಯಾಗಿರುವದರಿಂದ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸಿಗೆ ಯಾರೂ ಓಟು ಮಾಡಕೂಡದೆಂದು ಆಚಾರ್ಯ ರಂಗಾ ಒರೋಡಾದಲ್ಲಿ ತಿಳಿಸಿದ್ದಾರೆ

ಂ ಂ

ಆಚಾರ್ಯ ವಿನೋಬ ನಿನ್ನೆ ದಿಹಲಿಗೆ ಬಂದರು ಅವರು ಈಗಾಗಲೇ 8 ನೂರು ಮೈಲು ಕಾಲ್ನಡಿಗೆ ಪ್ರವಾಸ ಮಾಡಿದ್ದಾರೆ

ಂ ಂ

ಲಾ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ನೌಕರಿಗೆ ಮೇಯರ್ ಶ್ರೀ ಅನಂತರಾಮ್, ಚುನಾವಣೆಗೆ ಉನ್ಮೇದುವಾರರಾಗಿರುವುದರಿಂದ ರಾಜೀನಾಮೆ ಅರ್ಪಿಸಿರುವ ವಾರ್ತೆ ಇದೆ:

ಂ ಂ

ಭೂ ಸುಧಾರಣೆ ಕಮ್ಯುನಿಸ್ಟ್ ಕಾರ್ಯಕ್ರಮಗಳಲ್ಲೊಂದು ಪರಿಹಾಂಕೊಡದೆ ಜನವರಿ ರದ್ದು ಮಾಡಲಾಗುವದು ಎಂದು ಶ್ರೀ ಗೋಪಾಲ್ ಈ ಬೆಳಿಗ್ಗೆ ಮೈಸೂರಿನಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು

ಂ ಂ

ಪಾಕಿಸ್ತಾನದಲ್ಲಿ ಉಪ್ಪಿನ ಅಭಾವ ವಾಗಿದೆ.

ಹುಷಾರಿಂತಾಗಿ ಉಣ್ಣೆಯ ಬಟ್ಟೆಯಿಂದ ಹಿಡಿದುಕೊಂಡು, ಅಡಿಗೆಯ ವಸ್ತುವಿನ ಬಚ್ಚಲಿನೊಳಗೆ ಯಾರಿಗೂ ತಿಳಿಯದಂತೆ ಸೀಸೆಯಲ್ಲಿದ್ದ ದ್ರವವನ್ನ ಸುರಿದನು. ಆದರೆ ಅದರಲ್ಲಿ ನೊರೆಗಳು ಎದ್ದವು ಆತನಿಗೆ ಏನು ಮಾಡಲೂ ತಿಳಿಯದೆ ಸ್ವಲ್ಪ ನೀರು ಸುರಿದನು ; ನೊರೆಗಳು ಏಳುತ್ತಾ ಏಳುತ್ತಾ ನೀರಿಂದಮೇಲೆ ಬರಲಾರಂಭಿಸಿದವು ; ಕಸಬರಿಕೆಯಿಂದ ಹೊರಕ್ಕೆ ತಳ್ಳಿಬಿಡಲಾರಂಭಿಸಿದನು : ಕೊಚ್ಚೆಯ ಗುಂಡಿಗಳೆಲ್ಲಾ ತುಂಬಿ ಹೋದವು ; ಬೀದಿಯಲ್ಲೆಲ್ಲಾ ಹರಡಿತು ಬೆಳಗಾಯಿತು : ಆತನಿಗೆ ಮನಸ್ಸು ಹೆಚ್ಚು ಚೀಸೀವಾಯಿತು : ಅಷ್ಟರಲ್ಲಿ ಕೊಚ್ಚೆಯ ಗುಂಡಿಗಳನ್ನು ಶುಭ್ರಪಡಿಸುವವರು ಬಂದು ಅಲ್ಲಿನ ಸ್ಥಿತಿಯನ್ನು ಕಂಡು ಪೋಲೀಸರಿಗೆ ತಿಳಿಸಿದರು : ಅವರು ಬಂದರು ; ಆ ಸಮಯಕ್ಕೇ ಅವರಿಗೆ ಫಿರ್ಯಾದು ಹೋಗಿತ್ತಾದುದರಿಂದ ಈತನೇ ಕಳ್ಳನೆಂದು ಆತನನ್ನು ಅರೆಸ್ಟು ಮಾಡಿದರು ; ಈತನೂ ಕೂಡ ಪೋಲೀಸರನ್ನು ನೋಡುತ್ತಾಲೂ ' ಈ ನೊರೆಗಳು ನನ್ನನ್ನು ಹಿಂಬಾಲಿಸುತ್ತಿದೆ : ನನ್ನನ್ನು ಅದರಿಂದ ದೂರಮಾಡಿ ರಕ್ಷಿಸಿ' ಎಂದು ಬೇಡಿಕೊಂಡನು. ಪಾಪ ! ಆ ವ್ಯಕ್ತಿಯು ಸೀಸೆಯ ಮೇಲಿನ ಹೆಸರನ್ನು ಓದಿಕೊಂಡನೇ ಹೊರತು ವಿವರಗಳನ್ನು ಓದಿನೋಡಿಕೊಳ್ಳಲಿಲ್ಲ ; ' ಜಾಗ್ರತೆ ! ನೀರಿನ ತೊಟ್ಟು ಸೋಕಿದಲ್ಲಿ ನೊರೆ ಏಳಲಾರಂಭಿಸುವುದು ' ಎಂದು ಬರೆದೇ ಇತ್ತು !

ಇದು ನಡೆದದ್ದು ಭಾರತದೇಶದ ಯಾವುದೋ ಹಳ್ಳಿಯಲ್ಲಲ್ಲ ; ಸ್ಯಾರಿಸ್ ನಗರದಲ್ಲಿ !

70–80 ವರ್ಷಗಳ ಹಿಂದೆ, ಸೀಮೇ ಎಣ್ಣೆಯು ಹೊಸಹಾಗಿ ಬಂದಾಗ ಒಬ್ಬ ಹಣವಂತನ ಮನೆಯಲ್ಲಿ, ಅದನ್ನು ನೋಡಿ, ಭತ್ಯವನ್ನು ಕುಟ್ಟಲು ಬಂದಿದ್ದವರು ' ಕಪ್ಪು ಎಣ್ಣೆ ' ಎಂದು ಯಾರೂ ಕಾಣದಂತೆ ಕೈಗಳಲ್ಲಿ ಸುರಿದುಕೊಂಡು ತಲೆಗೆ ಹಚ್ಚಿಕೊಂಡಂತೆ ! ಅವರಿಗಿಂ ಈ ನೌಕರನು ಹೆಚ್ಚು ಒದ್ದಿವಂತನಲ್ಲ ಹೆಂಡತಿಯ ಮೇಲಿನ ಪ್ರೇಮಾತಿಶಯವು ತನ್ನ ಕೇಡಿಗೇ ದಾರಿಯನ್ನು ತೋರಿಸಿತು

(ತ್ರಿ)

Kann. (Eng. 479)

ಉಷ್ಣ ವಲಯದ ಕೆಲಸಗಾರರಿಗೆ ಕ್ವಿನೈನು ತಕ್ಕ ಔಷಧ

ಏಷ್ಯಾದಲ್ಲಿ ಬ್ರಿಟಿಷರ ನೌಕಾ ನಿಲ್ದಾಣ ಸಿಂಗಪುರವು ಅದರ ಪ್ರಾಮುಖ್ಯತೆಯನ್ನು ಇಂದು ಹೊಂದಿದೆ. 2 ನೇ ಪ್ರಪಂಚ ಯುದ್ಧದಲ್ಲಿ ಈ ಒಹು ಭದ್ರ ಸ್ವಾಸ್ಥ್ಯವನ್ನು ಹಿಡಿಯುವುದಕ್ಕೆ ಮುಂಚೆ ಜಪಾನರು ತೀವ್ರ ಕದನ ನಡೆಸಬೇಕಾಯಿತು.

2 ನೇ ಯುದ್ಧಕ್ಕೆ ಸ್ವಲ್ಪ ಮುಂಚೆ ವಿಲಿಯಂ ಗಟ್ಲೆ ಪೌಂಡ್ ವೆಚ್ಚವಾಗಿ ಈ ನಿಲ್ದಾಣವು ಪೂರ್ಣ ಪುನರ್ರಚಿತವಾಗಿತ್ತು. ಇದಕ್ಕಾಗಿ ಅನಾರೋಗ್ಯ ಹವಾದಲ್ಲಿ ಸುಡುವ ಬಿಸಿಲಿನಲ್ಲಿ ಸಾವಿರಾರು ಕಾರ್ಮಿಕರು ಕೆಲಸ ಮಾಡಿದರು ಪಾಯು ತೋಡುವ ಕಾರ್ಯದಲ್ಲಿ ಬಹು ಭಾಗವು ನೀರಿನ ಕೊಳಕು ಹಳ್ಳಗಳಾಗಿ ಭಯಂಕರ ಮಲೇರಿಯ ಹರಡುವ ಸೊಳ್ಳೆಗಳ ತೌರೂರಾಗಿ ಪರಿಣಮಿಸಿತು

ಎಂಜನೀಯರುಗಳು ಕೆಲಸಗಾರರನ್ನು ತೊಂದರೆಗೀಡು ಮಾಡುತ್ತಿದ್ದ ಮಲೇರಿಯಾದ ಅಪಾಯವನ್ನು ಪೂರ್ವ ತಿಳಿದುಕೊಂಡು ಅವರಿಗೆ ಕ್ವಿನೈನು ಕೊಟ್ಟು ಈ ಘೋರ ಖಾಯಿಲೆಗಳಿಂದ ರಕ್ಷಿಸಿದರು.

" ಎಲ್ಲ ಉಷ್ಣ ದೇಶಗಳಲ್ಲೂ ಮಲೇರಿಯಾದಿಂದ ರಕ್ಷಿತವಾಗಿರುವದು ಅತ್ಯವಶ್ಯಕವು ಈ ರೋಗವು ಸಹಿಷ್ಣುತೆಯ ಶಕ್ತಿಯನ್ನು ಬಹಮಟ್ಟಿಗೆ ಕುಗ್ಗಿಸುವುದಲ್ಲದೆ, ಪ್ರಾಣಾಪಾಯದ ಕೇಸುಗಳೂ ಹೆಚ್ಚಾಗಿವೆ

ಈ ಕಾರಣದಿಂದ ನಾಜಿ ಲೀಗ್ ಆಫ್ ನೇಷನ್ನಿನ ಮಲೇರಿಯ ನಿಪುಣ ಸಮಿತಿಯಿತ್ತಿರುವ ಸೂಚನೆಯು ಮುಖ್ಯವಾಗಿದೆ. ಉಷ್ಣವಲಯದ ಕಾರ್ಮಿಕರಿಗೆ ಬಹು ಮುಖ್ಯವಾಗಿದೆ

ವೆಲ್ಕಂಡ ಸಮಿತಿಯು 1938 ರಲ್ಲಿ ಒಂದು ವರದಿ ಪ್ರಕಟಿಸಿ ಪ್ರತಿಬಂಧಕವಾಗಿ ಮಲೇರಿಯಾ ಕಾಲದಲ್ಲಿ 6 ಗ್ರೇನು ಕ್ವಿನೈನು ಸೇವನೆಯನ್ನೂ, ಮಲೇರಿಯಾ ತಗುಲಿದಾಗ 5–7 ದಿವಸಗಳು ದಿನವಹಿ 15 ರಿಂದ 20 ಗ್ರೇನು ಕ್ವಿನೈನು ಸೇವನೆಯನ್ನೂ ಸೂಚಿಸಿದೆ. ಈ ಶಿಫಾರಸ್ಸುಗಳು ಇಂದು ಜಯಪ್ರದವಾಗಿ ಅನೇಕ ಉಷ್ಣವಲಯದ ವಸ್ತು ಅರ್ಧ ಉಷ್ಣವಲಯದ ಸ್ಥಳಗಳಲ್ಲಿ ಅನುಸರಿಸಲಾಗುತ್ತಿದೆ

ಉಡ್‌ಲಾಂಡ್ ಜನಭರಿತ 2 ನೇ ವಾರ

ಶಿ ನ

ಏನಾ ಪಿಕ್ಚರ್ಸ್‌ರವರ ಸುಮನೋಹರ ಸಾಮಾಜಿಕ ಹಿಂದಿ ಚಿತ್ರ

ಗುಮಾಸ್ತ Gumastha

ಪಾತ್ರ— ನಿಗಾರ್, ವಾಸ್ತಿ, ಮಿರ್ಜಾಮುಷ್ತಾಫ್, ಕುಲದೀಪ್

ಪ್ರತಿ ದಿನ 3 ಪ್ರದರ್ಶನಗಳು

ರಣಜಿತ್ 16–11–51 ರಿಂದ

ಏಕ್ ನಜರ್ Ek Nazar

ತಾರಾಗಣ— ನಳಿನಿ ಜಯವಂತ್, ರೆಹನೂರ್, ಕರ್ದಿವರ್, ಗೋಪ್

ಮನಮೋಹಕ ಹಿಂದಿ ಚಿತ್ರ | ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 16–11–51 ರಿಂದ ಷಹಜಹಾನ್ (ಹಿಂದಿ)

ಅಪೇರ—

9–11–51 ರಿಂದ

ರಾಮ ವಿವಾಹ

(ಹಿಂದಿ)

ಪಾತ್ರ– ಪ್ರೇಂಅದೀಬ್, ಉಮಾಕಾಂತ್

ಶೋಭನಸಮರ್ಥ [ದಿನ 3 ಆಟಗಳು

ಬೆಳಗಿನ ಪ್ರದರ್ಶನ 16–11–51 ರಿಂದ

ಮುಜ್ರಿಮ್ (ಹಿಂದಿ)

ಗೋ ಸಂರಕ್ಷಣೆ ಮಾಡಿ



Protect the Cow

Edited, Printed and Published by Dharma Prachara Nirata M. S. Krishna Rao, at the Satyavadi Press Chamrajpuram Mysore